

ಇಳಿಯಲೋ ಬೇಡವೋ? ಇಲ್ಲಿಂದಲೇ ವಾಪಾಸಾದರೆ ಹೇಗೆ? ಇದೆಲ್ಲಾ ಬೇಕಿತ್ತಾ ನನಗೆ? ಎಂಬ ಹಿಂಜರಿಕೆಯಾಗಿ ಕಾರಲ್ಲೇ ಕುಳಿತ.

ಅದನ್ನು ಗ್ರಹಿಸಿದ ಆಗಂತುಕ 'ಹೇ...ಇಳಿರಿ ಸಾರ್! ಏನೂ ಮುಜುಗರ ಪಟ್ಟುಕೋಬೇಡಿ' ಎನ್ನುತ್ತಾ ಒತ್ತಾಯದಿಂದ ಇಳಿಸಿದ. ಅಜಯ್ ಕೇರಿಯನ್ನೊಮ್ಮೆ ದೀರ್ಘವಾಗಿ ಅವಲೋಕಿಸಿದ. ಅದು ಅವನೊಳಗೆ ಅನಂತಮೂರ್ತಿಯವರ 'ಸಂಸ್ಕಾರ' ದಲ್ಲಿನ ಅಗ್ರಹಾರವನ್ನು ನೆನಪಿಗೆ ತಂದಿತು. ಸುಮಾರು ಐನೂರು ಗಜಗಳಷ್ಟು ಉದ್ದದ ರಸ್ತೆಯ ಇಕ್ಕೆಲದಲ್ಲೂ ಹಳೆಯ ಕಾಲದ ವಾಟೆ ಹಂಚು ಹೊದೆಸಿದ್ದ, ಮಣ್ಣಿನ ಗೋಡೆಯ ಸಣ್ಣ ಸಣ್ಣ ಮನೆಗಳಿದ್ದುವು. ಕೆಲವದರ ಬಾಗಿಲು ಮುಚ್ಚಿದ್ದರೆ, ಇನ್ನು ಕೆಲವು ತೆರೆದು ಕೊಂಡೂ, ಮತ್ತೆ ಕೆಲವು ಅರೆ ತೆರೆದುಕೊಂಡು ಬಣಗುಟ್ಟುತ್ತಿದ್ದವು. ಕೇರಿಯ ಕೊನೆಯ ಮುರುಕಲು ಮನೆಯ ಜಗುಲಿಯ ಮೇಲೆ ಮೂವತ್ತೈದರ ಆಸುಪಾಸಿನ, ಮುಕ್ಕಾಲು ಲಂಗ ತೊಟ್ಟು ಕ್ರೈಸ್ತಳಂತೆ ಕಾಣುತ್ತಿದ್ದ, ಗೋಧಿ ಮೈಬಣ್ಣದ ಸುಂದರ ಹೆಣ್ಣೊಬ್ಬಳು ಕುಳಿತು, ಬಾಲಕಿಯೊಂದಿಗೆ ನಗುತ್ತಾ ಹರಟುತ್ತಿದ್ದಳು. ಆದರೆ ದೂರದಿಂದಲೇ ಯಾರೋ ಬರುತ್ತಿರುವುದನ್ನು ಗಮನಿಸಿ, ದಡಕ್ಕನೆದ್ದು ಒಳಗೆ ನಡೆದಳು. ಹೆಣ್ಣು ಮಗುವೂ ಎದುರು ಮನೆಗೆ ನುಸುಳಿತು.

'ಸಾರ್, ಈ ಕೇರಿ ಈಗ ಬಡ ಸಂಸಾರಸ್ಥರ ಕೊಂಪೆ. ನಾವು ಬಹಳ ಗೌಪ್ಯವಾಗಿ ಕೆಲಸ ಮುಗಿಸಿಕೊಂಡು ಹೋಗಬೇಕು. ಈಗ ನಮ್ಮನ್ನು ಕಂಡು ಒಳಗೆ ಹೋದಳಲ್ಲಾ, ಅವಳೇ ನಿಮ್ಮ ಹುಡುಗಿ' ಎಂದು ಆಗಂತುಕ ಹೇಳಿದಾಗ ಅಜಯ್‌ನ ಎದೆಬಡಿತ ತೀವ್ರವಾಗಿ ಹೋಗಲೋ ಬೇಡವೋ ಎಂಬ ದ್ವಂದ್ವ ಕಾಡಿತು. ಅವನ ಚಡಪಡಿಕೆಯನ್ನು ಗ್ರಹಿಸಿದ ಆಗಂತುಕ, ಕೈಹಿಡಿದು ಆಕೆಯ ಮನೆ ಬಾಗಿಲಿಗೇ ಕರೆದೊಯ್ದು 'ಹೂಂ, ಒಳಗೆ ಹೋಗಿ ಸಾರ್. ಈಗಿಲ್ಲಿ ಯಾರು ಹೊರಗಿಲ್ಲ' ಎಂದು ಅಜಯ್ ನನ್ನು ಒಳದಬ್ಬಿ ಬಾಗಿಲೆಳೆದುಕೊಂಡ.

ಅಜಯನಿಗೆ, ಒಂದೇ ಸಮನೆ ಬೆವರಾರಂಭಿಸಿತು. ಇದೇನು ಮಾಡುತ್ತಿದ್ದೇನೆ? ತಪ್ಪಲ್ಲವೇ! ದಿವ್ಯಾ ಅದೇನೇ ಮಾಡಿರಲಿ, ಆದರೂ ಕಷ್ಟ ಸುಖ ಹಂಚಿಕೊಂಡು ಬಂದು ನನ್ನನ್ನೇ ನಂಬಿದವಳಿಗೆ ನಾನು ಮಾಡುತ್ತಿರುವ ಮೋಸವಲ್ಲವೇ ಇದು? ಛೇ! ಎಂತಹ ವಾಂಛೆಗೆ ಬಲಿಯಾಗ ಹೊರಟಿರುವೆ! ಹೀಗಾದರೆ ಮುಂದೆಂದೂ ನನ್ನೊಳಗೆ ಆತ್ಮವಿಶ್ವಾಸ, ನೈತಿಕತೆಗಳು ಉಳಿದಾವೇ? ಎಂದು ಅಂಥಃಪ್ರಜ್ಞೆ ಎಚ್ಚರಿಸಿದರೂ.. ಅಂಥದ್ದೇನಾಯಿತೀಗ...! ನಿಜಕ್ಕೂ ನನ್ನವಳಿಂದ ತೃಪ್ತಿ ಪಟ್ಟಿದ್ದೇನೆಯೇ? ಮದುವೆಯಾದ ಆರಂಭದಲ್ಲಿದ್ದ ಸರಸ ಸಲ್ಲಾಪದ ಸುಖ ಆಮೇಲೆ ಮತ್ತೆಷ್ಟು ಕಾಲವಿತ್ತು? ನಿನ್ನ ಸುಖಕ್ಕೆ, ನೆಮ್ಮದಿಗೆ ಎಂದಾದರೂ ಆಕೆ ಬೆಲೆ ಕೊಟ್ಟಿದ್ದಾಳೆಯೇ? ದಿನೇ ದಿನೇ ಕಾಡ್ಗಿಚ್ಚಿನಂತೆ ಸುಡುವ ಅತೃಪ್ತ ಸುಖದ ಆಸೆಯಿಂದಲೇ ಅಲ್ಲವೇ ನೀನಿಂದು ಇಂಥ ನಿರ್ಧಾರ ತಳೆದಿದ್ದು? ಎಂದೆನಿಸಿದ್ದೇ ತಡ ಅಜಯ್, 'ಕಾಮಾತುರಾಣಾಂ ನ ಭಯಂ ನ ಲಜ್ಜಾ' ಎಂಬಂತೆ ಮೆಲ್ಲನೆ ಅವಳ ಕೋಣೆಗೆ ಪ್ರವೇಶಿಸಿದ.

ಚಿಮಿಣಿ ದೀಪದ ಮಂದ ಬೆಳಕಿಗೆ ಇಡೀ ಕೋಣೆ ಮಾದಕ ಸೌಂದರ್ಯ ದಿಂದ ಬೆಳಗುತ್ತಿತ್ತು. ಅಳುಕಿನಿಂದಲೇ ಅಜಯ್ ಬಾಗಿಲು ಸರಿಸಿದ. ಆ ಹೆಣ್ಣು ಮಂಚದ ಮೂಲೆಯಲ್ಲಿ ಕುಳಿತಿದ್ದಳು. ದೀಪದ ಬೆಳಕು ಅವಳ ದೇಹದ ಮೇಲೆಲ್ಲಾ ಮಂದವಾಗಿ ಪಸರಿಸಿ, ಕತ್ತಲೆ ಬಸದಿಯೊಳಗಿನ ವಿಘ್ನಗೊಳ್ಳದ ಸುಂದರ ಶಿಲಾಬಾಲಿಕೆಯಂತೆ ಕಂಡಳು. ಚೂರೂ ಕೊರತೆಯಿರದ ನಯವಾದ ಉಬ್ಬು ತಗ್ಗಿನ, ಯೌವನ ತುಂಬಿದ ಕೋಮಲ ದೇಹವನ್ನು ಕಾಣುತ್ತಲೇ ಅಜಯನೊಳಗೆ ಮೆಲ್ಲನೆ ಕಾವೇದ್ದಿತು. ಅವನ ಕೈಗಳು ನಡುಗುತ್ತಿದ್ದವು, ಕಾಲುಗಳೂ ಆವೇಶ ಬಂದವುಗಳಂತೆ ಕಂಪಿಸಹತ್ತಿದವು. ಆದರೂ ಸಂಭಾಳಿಸಿಕೊಂಡು ಅವಳೆದುರಿನ ಕುರ್ಚಿಯಲ್ಲಿ ಕುಳಿತು ದೀರ್ಘವಾದ ಉಸಿರು ಚೆಲ್ಲಿದ.

'ಬನ್ನಿ ಇಲ್ಲಿ ಕುಳಿತುಕೊಳ್ಳಿ..'

ಆಕೆಯ ಪರಿಚಿತ ಸ್ವರ ಅಜಯ್‌ನನ್ನು ಬೆಚ್ಚಿ ಬೀಳಿಸಿತು. ಎಲ್ಲೋ ಕೇಳಿದ ಹಾಗಿದೆ? ಎಲ್ಲಿ? ದಿಗ್ಗನೆದ್ದವನೇ ಹತ್ತಿರ ಸರಿದು ದಿಟ್ಟಿಸಿ ನೋಡಿದ. ಕಣ್ಣು ಕತ್ತಲಿಟ್ಟಂತಾಗಿ ಕುಸಿದು ಬೀಳಲಿದ್ದವನು ಗೋಡೆಗಾನಿಸಿಕೊಂಡು ಕುಳಿತ.

* * *

ಹೌದು, ಅವಳೇ! ಇಪ್ಪತ್ತು ವರ್ಷದ ಹಿಂದೆ ತಾನು ಹುಚ್ಚನಂತೆ ಪ್ರೀತಿಸಿದ್ದ, ಅವಳಿಗಾಗಿ ಯಾರನ್ನೂ ಲೆಕ್ಕಿಸದೆ, ಹೆತ್ತವರನ್ನೂ ತುಚ್ಛೀಕರಿಸಿ, ಜೀವದ ಗೆಳೆಯರೊಂದಿಗೂ ಹೊಡೆದಾಡಿ, ಅವಳೇ ನನ್ನ ಸರ್ವಸ್ವವೆಂದು ನಂಬಿ ಪ್ರೇಮಿಸಿದ, ನನ್ನ ಮೊಟ್ಟ ಮೊದಲ ಪ್ರೀತಿಯ ಹುಡುಗಿ ಕ್ಲಾರಾ ಇವಳೇ! ತನ್ನ ಚಿಕ್ಕಪ್ಪನಿಂದಲೇ ಅತ್ಯಾಚಾರಕ್ಕೊಳಗಾಗಿ ಬಸುರಾದವಳು. ಆ ಸತ್ಯವನ್ನು ನನ್ನಿಂದ ಯಾಕೆ ಮುಚ್ಚಿಟ್ಟಳೋ. ಅದರ ಆರೋಪ ನನ್ನ ಮೇಲೆಯೇ ಬರುವಂತೆಯೂ ಮಾಡಿದಳಲ್ಲಾ. ಆದರೆ ಕೈಗೆ ಸಿಕ್ಕರೆ ಕೊಂದೇ ಬಿಡುವಷ್ಟಿದ್ದ ನನ್ನ ಆಗಿನ ಆಕ್ರೋಶ, ಪ್ರತಿಭಟನೆ, ನಿರಾಶೆಗಳಿಗೆ ಬೆದರಿ, ಕುಗ್ಗಿ, ದುಃಖಿ, ಅವಮಾನದಿಂದಲೋ ಏನೋ, ಒಂದು ದಿನ ರಾತೋರಾತ್ರಿ ಯಾರಿಗೂ ತಿಳಿಸದೆ ಕಾಣೆಯಾದಳು. ಆದರೆ ಇಂದು, ಛೇ! ಈ ಸ್ಥಿತಿಯಲ್ಲಿ ಎದುರಿಗೆ ಕುಳಿತಿದ್ದಾಳೆ! ಅಯ್ಯೋ ದೇವರೇ...! ಇದೆಂತಹ ದುಃಸ್ಥಿತಿ! ಮತ್ತೆ ಅವಳೆದುರೇ ನನ್ನನ್ನು ತಂದು ನಿಲ್ಲಿಸಿದೆಯಲ್ಲಾ..? ಎಂದು ಆಘಾತಗೊಂಡ ಅಜಯ್‌ನಲ್ಲಿ ಮಾತೇ ಹೊರಡಲಿಲ್ಲ. ಮುಂದಿನ ಒಂದು ಗಳಿಗೆ ವಿಲಕ್ಷಣ ಮೌನ ಆವರಿಸಿತು.

ಅಜಯ್‌ನನ್ನು ಕಂಡ ಕ್ಲಾರಾ ದಿಗ್ಭ್ರಾಂತಳಾದಳು. ಅವಳ ಕಂದಿದ ಮುಖದಲ್ಲಿ ತನ್ನ ಬಗೆಗೆ ಅಸಹ್ಯದ ಲೇಪವೂ ಇತ್ತು. ಬಿಕ್ಕಿಬಿಕ್ಕಿ ಅಳುತ್ತಿದ್ದಳು.

'ಏನಿದು ಕ್ಲಾರಾ... ನೀನು ಈ ಸ್ಥಿತಿಯಲ್ಲಿ...?

'ಪ್ಲೀಸ್ ಅಜಯ್, ನನ್ನನ್ನೇನೂ ಕೇಳಬೇಡಿ. ನಿಮಗೆ ಮೋಸ ಮಾಡಿದವಳು ನಾನು. ನಿಮ್ಮ ನಿರ್ಮಲ ಪ್ರೇಮವನ್ನು ಅವಮಾನಿಸಿದವಳು. ಅದಕ್ಕೇ ದೇವರು ನನಗೆ ಇಂತಹ ಶಿಕ್ಷೆ ನೀಡಿದನೇನೋ. ಜೀವನದಲ್ಲಿ ಎಂದೂ ನಿಮಗೆ ಈ ದರಿದ್ರ ಮುಖವನ್ನು ತೋರಿಸಬಾರದೆಂದಿದ್ದೆ. ಆದರೆ ವಿಧಿಯ ಆಟ ನೋಡಿದಿರಾ? ಎಂಥ ಸ್ಥಿತಿಯಲ್ಲಿ ನಮ್ಮನ್ನು ಸೇರಿಸಿದೆ! ದಯವಿಟ್ಟು ಹೊರಟು ಹೋಗಿ...' ಎಂದವಳೇ ಒಂದೇ ಸಮನೆ ಅಳಲಾರಂಭಿಸಿದಳು.

'ಆಯ್ತು ಕ್ಲಾರಾ ಹೋಗುತ್ತೇನೆ. ಆದರೆ ನೀನೇಕೆ ಇಂಥ ಕಸುಬಿಗಿಳಿದೆ? ಕೂಲಿನಾಲಿ ಮಾಡಿಯಾದರೂ ಬದುಕಬಹುದಿತ್ತಲ್ಲವೇ...?'

'ನಾನೆಲ್ಲಿ ಇಳಿದೆ ಅಜಯ್...? ನನ್ನವರೇ ಇಂತಹ ನರಕಕ್ಕೆ ತಳ್ಳಿದರು ಎಂಬುದು ನಾನು ಕಾಣೆಯಾದ ಮೇಲಾದರೂ ನಿಮಗೆ ತಿಳಿದಿರಬೇಕಲ್ಲವೇ..? ಈವಾಗ ನನ್ನನ್ನು ಈ ಸ್ಥಿತಿಗೆ ತಂದಿರಿಸಿದವನು ಬೇರಾರೂ ಅಲ್ಲ ಅಜಯ್, ನಿಮ್ಮನ್ನು ಕರೆ ತಂದನಲ್ಲಾ, ಅವನೇ ನನ್ನ ಗಂಡ ಅನ್ನೋ ನೀಚ! ಆದರೆ ನಾನೀಗ ಈ ಜೀವನಕ್ಕೆ ಒಗ್ಗಿ ಹೋಗಿದ್ದೇನೆ. ಇದು ಬಿಟ್ಟರೆ ಬೇರೆ ಬದುಕೇ ಇಲ್ಲ ಅನ್ನೋ ಸ್ಥಿತಿಗೆ ಬಂದಿದ್ದೇನೆ. ನನ್ನದು, ಮುಗಿದು ಹೋದ ಕಥೆ. ಅದರ ಬಗ್ಗೆ ಚಿಂತಿಸಿ ಪ್ರಯೋಜನವಿಲ್ಲ. ಆದರೆ ನಿಮಗೆ ಇಂತಹ ಜಾಗಕ್ಕೆ ಬರುವಂತಹ ಅವಸ್ಥೆ ಏಕಾದರೂ ಬಂತು ಅಜಯ್...?' ಎಂದು ಕ್ಲಾರಾ ವಿಷಾದದಿಂದ ಪ್ರಶ್ನಿಸಿದಳು.

'ಇನ್ಯಾಕೆ ಬಂದಿರುತ್ತೆ...? ಒಂದೆಡೆ ಏಕಾಂಗಿತನದ ಭಾದೆ, ಇನ್ನೊಂದೆಡೆ ದೇಹದ ಹಸಿವು ಎರಡೂ ಸೇರಿ ಇಲ್ಲಿಯವರೆಗೆ ಎಳೆದು ತಂದವೇನೋ! ಆದರೆ ಛೀ! ಪ್ರೇಮಿಸಿದ ಹೆಣ್ಣಿಗೇ ವಿಟನಾಗಿ ಬಂದಿರುವೆನೆಂದರೆ ನಾನೆಂಥ ಪಾಪಿಯಲ್ಲವೇ ಕ್ಲಾರಾ?' ಎನ್ನುತ್ತಿದ್ದಂತೆಯೇ ಅಜಯ್‌ನ ಕಣ್ಣಾಲಿಗಳೂ ತೇವಗೊಂಡವು.

ಕ್ಲಾರಾ, ಮತ್ತೆ ಮಾತಾಡಲಿಲ್ಲ. ಹೆಚ್ಚು ಹೊತ್ತು ಕುಳಿತುಕೊಳ್ಳಲು ಅವನ ಮನಸ್ಸೂ ಕೇಳಲಿಲ್ಲ. ಹೊರಡುವ ಮುನ್ನ ಕೈಗೆ ಸಿಕ್ಕಿದ ನೋಟಿನ ಕಂತೆಯೊಂದಿಗೆ, ವಿಸಿಟಿಂಗ್ ಕಾರ್ಡನ್ನೂ ಅವಳ ಕೈಗೆ ತುರುಕಿಸಿದ.

'ನಿನ್ನ ಮಗಳ ಭವಿಷ್ಯದ ದೃಷ್ಟಿಯಿಂದಲಾದರೂ ನೀನು ಈ ಬದುಕಿನಿಂದ ಹೊರಬರಲು ಇಚ್ಛಿಸಿದರೆ, ಸಂಕೋಚವಿಲ್ಲದೆ ಕರೆ ಮಾಡು. ನಿನ್ನ ಸಹಾಯಕ್ಕೆ ನಾನು ಸದಾ ಸಿದ್ಧ' ಎಂದವನೇ ಮತ್ತಲ್ಲಿ ನಿಲ್ಲಲಾಗದೆ ಹೊರಗೆ ಬಂದುಬಿಟ್ಟ.

ಕಾವಲಿಗನಂತೆ ಬಾಗಿಲಲ್ಲೇ ಕುಳಿತು ಬೀಡಿ ಸೇದುತ್ತಾ ಧೂಮಲೀಲೆ ಸೃಷ್ಟಿಸುವುದರಲ್ಲಿ ಮಗ್ನನಾಗಿದ್ದ ಆಗಂತುಕ ಅಜಯ್‌ನನ್ನು ಕಂಡವನು ದಡಕ್ಕನೆದ್ದು 'ಹೆ್ಹೆಹ್ಹೆ! ಹೇಗಿತ್ತು ಸಾರ್ ಮಾಲು...?' ಎಂದು ಹುಬ್ಬು ಕುಣಿಸುತ್ತಾ ನಕ್ಕಾಗ, ಆತನನ್ನಲ್ಲೇ ಕೊಂದು ಬಿಸಾಕುವಷ್ಟು ರೋಷ ಉಕ್ಕಿತು ಅಜಯ್‌ಗೆ.

'ಥೂ! ನಾಯಿ! ನಂಬಿ ಬಂದ ಅಮಾಯಕ ಹೆಣ್ಣನ್ನೇ ತಲೆಹಿಡಿದು ಬದುಕುತ್ತಿರುವ ನೀನೆಂಥ ಗಂಡಸೋ...! ನಿನ್ನ ಜನ್ಮಕ್ಕಿಷ್ಟು' ಎನ್ನುತ್ತಾ, ಉಕ್ಕಿ ಬಂದ ಕೋಪ ಹತ್ತಿಕ್ಕಲಾರದೆ ಪಟಪಟನೇ ಕೆನ್ನೆಗೆರಡೇಟು ಬಿಗಿದು, ಒದ್ದು ದೂರ ತಳ್ಳಿದ. ಅನಿರೀಕ್ಷಿತ ಆಘಾತದಿಂದ ಹೆದರಿ ಬೆಚ್ಚಿಬಿದ್ದ ತಲೆಹಿಡುಕ ಸಾವರಿಸಿಕೊಂಡು ದಡಬಡನೆದ್ದು ಗೋಡೆಗೊರಗಿ ನಿಂತು ತಲೆತಗ್ಗಿಸಿದ. ಅಜಯನಿಗೆ ನಿಂತ ಭೂಮಿಯೇ ಕುಸಿಯುವಂತಾಯಿತು. ಬೇಗ ಬೇಗನೇ ದಾಪುಗಾಲಿಕ್ಕುತ್ತಾ ಹೋಗಿ ಕಾರು ಹತ್ತಿದ.